ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣ–ತುಂಗ ಆವರಣ, ಮಂತ್ರಾಲಯ ರಸ್ತೆ (ಎನ್.ಹೆಚ್. 167), ಯರಗೇರಾ–584133, ರಾಯಚೂರು, ಕರ್ನಾಟಕ
ಶೈಕ್ಷಣಿಕ ವಿಭಾಗ

E-mail: registrarrur@gmail.com Website: https://raichuruniversity.ac.in

ಸಂ.ರಾವಿರಾ/ಆಡಳಿತ/ವಿದ್ಯಾವಿಷಯಕಪರಿಷತ್/2023–24/1228 ದಿನಾಂಕ: 21.12.2023

## ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಸೂಚನಾ ಪತ್ರ

ವಿಷಯ: ದಿನಾಂಕ: 27.12.2023 ರಂದು ಬುಧವಾರ ಬೆಳ್ಳಿಗ್ಗೆ 11.30 ಗಂಟೆಗೆ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯನ್ನು ಆಯೋಜಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:22.12.2023

ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ರಾಯಚೂರು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್‌ನ ಸಾಮಾನ್ಯ ಸಭೆಯನ್ನು ದಿನಾಂಕ **27.12.2023** ರಂದು ಬುಧವಾರ ಬೆಳಿಗ್ಗೆ **11.30** ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಆಯೋಜಿಸಲಾಗಿದೆ. ಕಾರಣ ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

### ಸಾಮಾನ್ಯ ಸಭೆಯ ಕಾರ್ಯಸೂಚಿ

01. ದಿನಾಂಕ: 17.08.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ತುರ್ತು ಸಭೆಯ ನಡವಳಿಗಳನ್ನು ಧೃಡಿಕರಿಸುವ ಕುರಿತು.

02. ದಿನಾಂಕ 18.12.2023 ರಂದು ಜರುಗಿದ 2023–24 ನೇ ಆರ್ಥಿಕ ಸಾಲಿನ ಮೋದಲನೇ ಮತ್ತು ಎರಡನೇ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ದೃಡೀಕರಿಸುವ ಕುರಿತು.

03. ರಾಯಚೂರು ವಿಶ್ವವಿದ್ಯಾಲಯದ 2023–24 ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ (PG) ಪದವಿ ಪಠ್ಯಕ್ರಮ ಹಾಗೂ ನಿಯಮಾವಳಿಯನ್ನು(Regulations) ಅನುಮೋದಿಸುವ ಕುರಿತು ಚರ್ಚೆ.

04. ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ಕ್ರಮ ನಿಯಮಾವಳಿ –2023 (Raichur University Examination Regulations-2023) ಗಳನ್ನು ಚರ್ಚಿಸಿ ಅನುಮೋದಿಸುವ ಕುರಿತು.

05. ರಾಯಚೂರು ವಿಶ್ವವಿದ್ಯಾಲಯದ ಕರಡು ವಿಧೇಯಕ ಹಾಗೂ ನಿಯಮಾವಳಿ 2023 (Raichur University Statutes Governing C&R and Ph.D Regulations-2023) ಗಳನ್ನು ಚರ್ಚಿಸಿ ಅನುಮೋದಿಸುವ ಕುರಿತು.

06. 2023–24 ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ (UG) ಪದವಿ ಹೆಚ್ಚುವರಿ ಪ್ರವೇಶಾತಿ ಮಿತಿ 20% Additional Seats ( 20ಕ್ಕೆ ಮೀರದಂತೆ) ತೆಗೆದುಕೊಳ್ಳುವ ಕುರಿತು ಚರ್ಚೆ.

07. LSC- (Logistic Sector Council) ನ ಪಠ್ಯಕ್ರಮ ಹಾಗೂ ನಿಯಮಾವಳಿಯನ್ನು(Regulations) ಅನುಮೋದಿಸುವ ಕುರಿತು ಚರ್ಚೆ.

08. ದಿನಾಂಕ 18.12.2023 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ ಅನುಮೋದನೆಗೊಂಡ ಕರ್ನಾಟಕ ರಾಜ್ಯ ಕ್ರೀಕೆಟ್ ಸಂಘ (Karnataka State Cricket Association (KSCA) ಹಾಗೂ ರಾಯಚೂರು ವಿಶ್ವವಿದ್ಯಾಲಯದ ನಡುವೆ ವಿಶ್ವವಿದ್ಯಾಲಯದ ಕ್ರೀಕೆಟ್ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಭೂಮಿಯನ್ನು ನೀಡುವ ಕುರಿತು ಒಪ್ಪಂದ (MoU) ಮಾಡಿಕೊಳ್ಳಲು ವಿದ್ಯಾವಿಷಯಕ ಪರಿಷತ್ ಅನುಮೋದನೆ ನೀಡುವ ಕುರಿತು.

09. ಚಿನ್ನದ ಪದಕ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅನುಮೋದಿಸುವ ಕುರಿತು.

10. LIC ತಂಡದಿಂದ ಮರು ತನಿಖೆಗೆ ಅರ್ಜಿ ಸಲ್ಲಿಸಿದ 4 ಕಾಲೇಜುಗಳು ಹಾಗೂ ತಡವಾಗಿ ಸಂಯೋಜನಾ ಅರ್ಜಿ ಸಲ್ಲಿಸಿದ 2 ಕಾಲೇಜುಗಳು ಸೂಚಿತ ಸಂಯೋಜನಾ ಅಂಕಗಳನ್ನು ಪಡೆದುಕೊಂಡಿರುವುದರಿಂದ ಸದರಿ ಕಾಲೇಜುಗಳಿಗೆ 2023–24 ನೇ ಸಾಲಿಗೆ ಸಂಯೋಜನಾ ಮುಂದುವರಿಕೆಗೆ ಅನುಮೋದನೆ ನೀಡುವ ಕುರಿತು.

11. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು.

21/12/23

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು.

<u>ಪ್ರತಿಗಳು ಮಾಹಿತಿಗಾಗಿ</u>

1. ಮಾನ್ಯ ಕುಲಪತಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ರಾಯಚೂರು ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ.

## ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳು.

ದಿನಾಂಕ: 27-12-2023 ರಂದು ಮುಂಜಾನೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳು.

### ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

1. ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2. ಡಾ. ಇಕ್ಬಾಲ್ ಶೇಖ್, – ಸದಸ್ಯರು
3. ಡಾ. ಎ.ಆರ್. ಪುರವಂತ, – ಸದಸ್ಯರು
4. ಶ್ರೀ. ಟಿ. ಶಿವಪ್ರಸಾದ ರಾವ್, – ಸದಸ್ಯರು
5. ಶ್ರೀ. ಎನ್. ಸತೀಶ, – ಸದಸ್ಯರು
6. ಶ್ರೀ. ಕಿಶನ್ ರಾಥೋಡ, – ಸದಸ್ಯರು
7. ಶ್ರೀ. ಪಾಂಡು, – ಸದಸ್ಯರು
8. ಡಾ. ಮಲ್ಲಿಕಾರ್ಜುನ ಎಂ. ಕುಲಕರ್ಣಿ, – ಸದಸ್ಯರು
9. ಶ್ರೀ. ಮೊಹ್ಮದ್ ಮುಜಾಕೀರ್ ಅಲಿ, – ಸದಸ್ಯರು
10. ಶ್ರೀ. ನಾಗರಾಜ ನಾಯಕ (ಹಣಕಾಸು ಅಧಿಕಾರಿಗಳು) – ಸದಸ್ಯರು
11. ಪ್ರೊ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
12. ಪ್ರೊ. ಪಾರ್ವತಿ ಸಿ. ಎಸ್. (ಡೀನರು) – ಸದಸ್ಯರು
13. ಡಾ. ರಾಘವೇಂದ್ರ ಫತ್ತೇಪೂರು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
14. ಡಾ. ಜಿ.ಎಸ್. ಬಿರಾದಾರ, ಗ್ರಂಥಪಾಲಕರು – ಸದಸ್ಯರು
15. ಶ್ರೀ. ದಿನೇಶ ಬಾಳಿಗ – ವಿಶೇಷ ಆಹ್ವಾನಿತರು
16. ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೇಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಗುತ್ತದೆ.

| ಕಲಂ/ ಐಟಂ | ವಿಷಯ | ವಿದ್ಯಾವಿಷಯಕ ಪರಿಷತ್‌ನ ನಿರ್ಣಯ |
|---|---|---|
| 01 | ದಿನಾಂಕ: 17.08.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ತುರ್ತು ಸಭೆಯ ನಡವಳಿಗಳನ್ನು ಧೃಡಿಕರಿಸುವ ಕುರಿತು. | ದಿನಾಂಕ: 17.08.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ತುರ್ತು ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| 02 | ದಿನಾಂಕ 18.12.2023 ರಂದು ಜರುಗಿದ 2023-24 ನೇ ಆರ್ಥಿಕ ಸಾಲಿನ ಮೊದಲನೇ ಮತ್ತು ಎರಡನೇ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ದೃಡೀಕರಿಸುವ ಕುರಿತು. | ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 18.12.2023 ರಂದು ಜರುಗಿದ 2023-24 ನೇ ಆರ್ಥಿಕ ಸಾಲಿನ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಹಣಕಾಸು ಸಮಿತಿಯ ಸಭೆಯಲ್ಲಿ ಚರ್ಚಿಸಲಾದ 22 ವಿಷಯಗಳ ಬಗ್ಗೆ ಹಣಕಾಸು ಅಧಿಕಾರಿಗಳು ಸಭೆಗೆ ವಿಸ್ತಾರವಾಗಿ ವಿವರಣೆ ನೀಡಿದರು. ರಾಯಚೂರು ವಿಶ್ವವಿದ್ಯಾಲಯದ 2023-24 ಮತ್ತು 2024-25ನೇ ಸಾಲಿನ ಆಯವ್ಯಯ ಅಂದಾಜುಗಳ ವೆಚ್ಚ, ಅಂದಾಜುಗಳ ಅಪೆಂಡಿಕ್ಸ್-ಬಿ (ಅನುಬಂಧ-1) ವೆಚ್ಚಗಳನ್ನು ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ ವಿವರಣೆಯನ್ನು ನೀಡಿ, ಅದನ್ನು ಸಭೆಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಸಲ್ಲಿಸಲು ತಿರ್ಮಾನಿಸಿ ಸರ್ವಾನುಮತದಿಂದ ಅಂಗೀಕರಿಸಿ ದೃಢೀಕರಿಸಲಾಯಿತು.<br><br>ಕರ್ನಾಟಕ ಸರ್ಕಾರ ನೇಮಿಸಿದಂತಹ ಏಕರೂಪ ಶುಲ್ಕ ತಜ್ಞರ ಸಮಿತಿಯ ವರದಿಯನ್ನು (ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ |

| | | |
|---|---|---|
| | | ಅಧಿನಿಯಮ 2000ರಡಿ ನಿಯಂತ್ರಿಸಲ್ಪಡುವ, ಸಂಯೋಜನೆಗೊಳಿಸುವ ಹಾಗೂ ಏಕಾತ್ಮಕ ವಿಶ್ವವಿದ್ಯಾಲಯಗಳು ಸಹ ಸೇರಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಅನ್ವಯಿಸುವಂತೆ ವಿವಿಧ ಕೋರ್ಸುಗಳಿಗೆ ಏಕರೂಪದ ವಿದ್ಯಾರ್ಥಿ ಶುಲ್ಕಗಳನ್ನು ನಿಗದಿಪಡಿಸಲು, ಏಕರೂಪದ ಪರೀಕ್ಷಾ ಸಂಭಾವನೆಯನ್ನು ಗೊತ್ತುಪಡಿಸಲು ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗೊಳಿಸುವ) ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾಲಯಗಳಿಗೆ ಈ ವರದಿಯನ್ನು ಅನುಷ್ಠಾನಗೊಳಿಸಲು ನಿರ್ದೇಶಿಸಿರುತ್ತದೆ. ಈ ಆದೇಶದ ಪ್ರಕಾರ ರಾಯಚೂರು ವಿಶ್ವವಿದ್ಯಾಲಯವು ಸರಕಾರದ ವರದಿಯನ್ನು ಒಪ್ಪಿಕೊಂಡು ಅನುಷ್ಠಾನಗೊಳಿಸಲು ತಿರ್ಮಾನಿಸಿದ್ದು ಈ ವರದಿಯನ್ನು ಪರಿನಿಯಮಾವಳಿಯಾಗಿ ರೂಪಿಸಿ ಸರಕಾರದ ಒಪ್ಪಿಗೆಗೆ ಕಳುಹಿಸಲು ಸಭೆಯಲ್ಲಿ ಅನುಮೋದಿಸಲಾಯಿತು. |
| 03 | ರಾಯಚೂರು ವಿಶ್ವವಿದ್ಯಾಲಯದ 2023-24 ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ (PG) ಪದವಿ ಪಠ್ಯಕ್ರಮ ಹಾಗೂ ನಿಯಮಾವಳಿಯನ್ನು (Regulations) ಅನುಮೋದಿಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ 2023-24 ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ ವಿವಿಧ ವಿಭಾಗಗಳ (PG) ಪದವಿ ಪಠ್ಯಕ್ರಮವು BOS ಮುಖಾಂತರ ರಚಿಸಲಾಗಿದ್ದು ಈ ಪಠ್ಯಕ್ರಮವನ್ನು ಚರ್ಚಿಸಿ ಅನುಮೋದಿಸಲಾಯಿತು. ರಾಯಚೂರು ವಿಶ್ವವಿದ್ಯಾಲಯದ ನಿಕಾಯಗಳಾದ Science & Technology, Arts ಹಾಗೂ Commerce ಇವುಗಳ regulations ಅನ್ನು ರಚಿಸಲು ಸ್ಥಾಪಿಸಿದ ಸಮಿತಿಯು ನೀಡಿರುವ Regulationsನ್ನು ಕುಲಂಕೂಷವಾಗಿ ಚರ್ಚಿಸಿ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಿಕೊಡಲು ನಿರ್ಧರಿಸಲಾಯಿತು. |
| 04 | ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ಕ್ರಮ ನಿಯಮಾವಳಿ -2023 (Raichur University Examination and ordinance -2023) ಗಳನ್ನು ಚರ್ಚಿಸಿ ಅನುಮೋದಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾಕ್ರಮ ನಿಯಮಾವಳಿ ರಚಿಸಲು ಸ್ಥಾಪಿಸಿದ ಸಮಿತಿಯು ನೀಡಿದಂತಹ draft regulation ಹಾಗೂ Draft Ordinance ಗಳನ್ನು ಕುಲಸಚಿವರು ಮೌಲ್ಯಮಾಪನರಿಗೆ ನೀಡಿದ್ದು, ಅವುಗಳನ್ನು ಸಭೆಯಲ್ಲಿ ಒಂದೊಂದಾಗಿ ಈ ಕೆಳಗಿನಂತೆ ಸುಧೀರ್ಘವಾಗಿ ಚರ್ಚಿಸಿ ಅನುಮೋದಿಸಲಾಯಿತು.<br>a. Draft ordinance governing the acts of punishment for duties, misbehavior and indiscipline by person involved in university examination work.<br>b. Ordinance governing revaluation/ challenge valuation of answer book and grace marks of the university examination.<br>ಈ ಮೇಲ್ಕಂಡ Draft regulation ಹಾಗೂ Draft Ordinanceಗಳು ವಿಶ್ವವಿದ್ಯಾಲಯಕ್ಕೆ ಬೇಕಾಗಿರುವ ಪ್ರಮುಖವಾದ ನಿಯಮಾವಳಿಗಳಾಗಿದ್ದು, ಇದರ ಅವಶ್ಯಕತೆ ಇರುವುದರಿಂದ ಇದನ್ನು ಮಂಡಿಸಲಾಗಿದೆಯೆಂದು ಕುಲಸಚಿವರು (ಮೌಲ್ಯಮಾಪನ) ಸಭೆಗೆ ತಿಳಿಸಿದರು. ಸಭೆಯು ಈ Draft regulation ಹಾಗೂ Draft Ordinanceಗಳನ್ನು ಸುಧೀರ್ಘವಾಗಿ ಚರ್ಚಿಸಿ ಅನುಮೋದಿಸಿತು. ಮುಂದುವರೆದು ಈ ನಿಯಮಾವಳಿಗಳನ್ನು ಮುಂದಿನ ಕ್ರಮಕ್ಕಾಗಿ ಘನವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲು ತೀರ್ಮಾನಿಸಲಾಯಿತು. |

<table>
<tr>
<td>05</td>
<td>ರಾಯಚೂರು ವಿಶ್ವವಿದ್ಯಾಲಯದ ಕರಡು ವಿಧೇಯಕ ಹಾಗೂ ನಿಯಮಾವಳಿ 2023 (Raichur University Statutes and Regulations-2023) ಗಳನ್ನು ಚರ್ಚಿಸಿ ಅನುಮೋದಿಸುವ ಕುರಿತು.</td>
<td>ರಾಯಚೂರು ವಿಶ್ವವಿದ್ಯಾಲಯಕ್ಕೆ ಅವಶ್ಯಕತೆ ಇರುವ ವಿಧೇಯಕಗಳು ಹಾಗೂ ನಿಯಮಾವಳಿಗಳನ್ನು ರಚಿಸಿ ನೇಮಿಸಿದ ಸಮಿತಿಯು Draft Statute ಮತ್ತು Regulations ನ್ನು ಕುಲಸಚಿವರಿಗೆ ನೀಡಿದ್ದು ಈ draft Statute ಗಳನ್ನು ಸಭೆಯಲ್ಲಿ ಈ ಕೆಳಗಿನಂತೆ ಮಂಡಿಸಿದರು.<br>a. Draft Statute Governing The Cadre & Recruitment of the Employees (Non- Teaching) of the Raichur University<br>b. Draft Regulations Governing the minimum Standards and Procedure for Award of Ph.D Degree at Raichur University-2023<br>c. Statute for appointment of Adjunct Faculty/ Professor of practice at Raichur University 2023.<br><br>ಈ ಮೇಲ್ಕಂಡ ಕರಡು ವಿಧೇಯಕ ಮತ್ತು ಪರಿನಿಯಮಾಳಿ ವಿಶ್ವವಿದ್ಯಾಲಯಕ್ಕೆ ಬೇಕಾಗಿರುವ ಪ್ರಮುಖವಾದ ನಿಯಮಾವಳಿಗಳಾಗಿದ್ದು, ಇದರ ಅವಶ್ಯಕತೆ ಇರುವುದರಿಂದ ಇದನ್ನು ಮಂಡಿಸಲಾಗಿದೆಯೆಂದು ಕುಲಸಚಿವರು ಸಭೆಗೆ ತಿಳಿಸಿದರು. ಸಭೆಯು ಈ ಕರಡು ವಿಧೇಯಕ ಹಾಗೂ ಪರಿನಿಯಮಾಳಿಗಳನ್ನು ಸುಧೀರ್ಘವಾಗಿ ಚರ್ಚಿಸಿ ಅನುಮೋದಿಸಿತು. ಮುಂದುವರೆದು ಈ ಕರಡು ವಿಧೇಯಕ ಹಾಗೂ ಪರಿನಿಯಮಾವಳಿಗಳನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು.</td>
</tr>
<tr>
<td>06</td>
<td>2023–24 ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ (UG) ಪದವಿ ಹೆಚ್ಚುವರಿ ಪ್ರವೇಶಾತಿ ಮಿತಿ 20% Additional Seats (20ಕ್ಕೆ ಮೀರದಂತೆ) ತೆಗೆದುಕೊಳ್ಳುವ ಕುರಿತು ಚರ್ಚೆ.</td>
<td>UUCMS ತಾಂತ್ರಿಕ ದೋಷದಿಂದ 2023–24 ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ (UG) ಪದವಿ ಹೆಚ್ಚುವರಿ ಪ್ರವೇಶಾತಿ ಮಿತಿಗೆ Additional Seats 20% of existing intake (20ಕ್ಕೆ ಮೀರದಂತೆ) ಮೀರಿ 35 ಕಾಲೇಜುಗಳು ಪ್ರವೇಶಾತಿಯನ್ನು ಪಡೆದುಕೊಂಡಿವೆ. ಈ ಕೆಳಗೆ ಸೂಚಿಸಿದ ದಂಡಶುಲ್ಕ ಹಾಗೂ ವಿಶೇಷ ದಂಡಶಲ್ಕವನ್ನು ಭರಿಸಬೇಕೆಂದು ಸಭೆಯಲ್ಲಿ ಚರ್ಚಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಈ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ದಂಡವನ್ನು ವಿಧಿಸಿ ಹೆಚ್ಚುವರಿ ಪ್ರವೇಶಾತಿಯನ್ನು ವಿಶ್ವವಿದ್ಯಾಲಯವು ಅನುಮೋದಿಸಬಹುದಾಗಿ ತೀರ್ಮಾನಿಸಲಾಯಿತು.<br><br>
<table>
<tr><td colspan="4">20% of existing intake (not exceeding 20 seats)</td></tr>
<tr><td>Course</td><td>Affilation fee</td><td>Penalty</td><td>Total</td></tr>
<tr><td>BA/ B.com/ BSc</td><td>500</td><td>500</td><td>1000</td></tr>
<tr><td>BCA</td><td>1500</td><td>1000</td><td>2500</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><th colspan="4">20% + 20%</th></tr>
<tr><th>Course</th><th>Affilation fee</th><th>Special Penalty</th><th>Total</th></tr>
<tr><td>BA/ B.com/BS.c</td><td>500</td><td>2000</td><td>2500</td></tr>
<tr><td>BCA</td><td>1500</td><td>3000</td><td>4500</td></tr>
</table>
</td>
</tr>
<tr>
<td>07</td>
<td>LSC- (Logistic Sector Council)ನ ಪಠ್ಯಕ್ರಮ ಹಾಗೂ ನಿಯಮಾವಳಿಯನ್ನು(Regulations) ಅನುಮೋದಿಸುವ ಕುರಿತು ಚರ್ಚೆ.</td>
<td>ಭಾರತ ಸರ್ಕಾರದ NSFQ Level-5 ಮತ್ತು ಕರ್ನಾಟಕ ಸರ್ಕಾರದ KSDC ಇವರಿಂದ ಕೌಶಲ್ಯಾಭಿವೃದ್ಧಿಗೆ ಒತ್ತು ನೀಡುವ ಕೋರ್ಸ್‌ಗಳನ್ನು ರಚಿಸಲು ವಿಶ್ವವಿದ್ಯಾಲಯಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿರುತ್ತದೆ. ಈ ದಿಸೆಯಲ್ಲಿ UGC ತನ್ನ ಗೆಜೆಟ್ ನೋಟಿಫಿಕೇಶನ್‌ನ್ನು ಈ ಕೆಳಕಂಡ ಕೋರ್ಸ್‌ಗಳಿಗೆ ನಡೆಸಲು ಗೆಜೆಟ್ ಮುಖಾಂತರ ಹೊರಡಿಸಲಾಗಿರುತ್ತದೆ.
<ul>
<li>GoI- Gazette Notification on National skill qualification freme work No 19 of December 27, 2013</li>
<li>UGC Gazette Notificatin on approved normel dates for degree programmes No-27 of July,05,2014 05-11-2014</li>
<li>MHRD-Skill Assessment Matrix for vocational Advancement of youth No 36-10/2016-NEVQF</li>
<li>UGC Guidelines for apprenticeship embedded degree programme July 2020</li>
<li>An apprenticeship/ internship embedded degree programme shall be treated at par with the UG degree programmes specified by the UGC under section 22(3) of the UGC Act, 1956.</li>
<li>Students graduating from the apprenticeship/internship embedded degree programme shall be eligible to take admission in the Master's programme in the specific subject in which they have earned their undergraduate degree (i.e. bachelor degree) as well as in subject (s) for which they have taken 24 credits in the core subjects as a part of their undergraduate programme (see para 18 and para 19 for details). Such students shall also be considered eligible for transdisciplinary vertical mobility into such courses where entry qualification is a</li>
</ul>
</td>
</tr>
</table>

| | | |
|---|---|---|
| | | Bachelore Degree without specific requirements in a particular discipline.<br><br>ಈ ದಿಸೆಯಲ್ಲಿ ರಾಯಚೂರು ವಿಶ್ವವಿದ್ಯಾಲಯ LSC-(Logistic Sector Council) ಕೋರ್ಸ್‌ನ್ನು ಪ್ರಾರಂಭಿಸಿದ್ದು, ಮುಂದುವರೆದು ಈ ಕೋರ್ಸಗಳಿಗೆ (B.Com-LSC, BBA-LSC) ಪಠ್ಯಕ್ರಮ ಮತ್ತು ನಿಯಮಾವಳಿಯನ್ನು ಸುಧೀರ್ಘವಾಗಿ ಚರ್ಚಿಸಿ ಅನುಮೋದಿಸಲಾಯಿತು. ನಿಯಮಾಳಿಗಳನ್ನು (ಉನ್ನತ ಶಿಕ್ಷಣ ಇಲಾಖೆ) ಸರ್ಕಾರದ ಒಪ್ಪಿಗೆಗೆ ಸಲ್ಲಿಸಲು ನಿರ್ಧರಿಸಿ 2024–25 ನೇ ಶೈಕ್ಷಣಿಕ ಸಾಲಿನಿಂದ ಈ ಕೋರ್ಸ್‌ಗಳನ್ನು ನಡೆಸಲು ತೀರ್ಮಾನಿಸಲಾಯಿತು. |
| 08 | ದಿನಾಂಕ 18.12.2023 ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ ಅನುಮೋದನೆಗೊಂಡ ಕರ್ನಾಟಕ ರಾಜ್ಯ ಕ್ರೀಕೆಟ್ ಸಂಘ (Karnataka State Cricket Association (KSCA) ಹಾಗೂ ರಾಯಚೂರು ವಿಶ್ವವಿದ್ಯಾಲಯದ ನಡುವೆ ವಿಶ್ವವಿದ್ಯಾಲಯದ ಕ್ರೀಕೆಟ್ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಭೂಮಿಯನ್ನು ನೀಡುವ ಕುರಿತು ಒಪ್ಪಂದ (MoU) ಮಾಡಿಕೊಳ್ಳಲು ವಿದ್ಯಾವಿಷಯಕ ಪರಿಷತ್ ಅನುಮೋದನೆ ನೀಡುವ ಕುರಿತು. | ಕರ್ನಾಟಕ ರಾಜ್ಯ ಕ್ರೀಕೆಟ್ ಸಂಘ (Karnataka State Cricket Association (KSCA) ಹಾಗೂ ರಾಯಚೂರು ವಿಶ್ವವಿದ್ಯಾಲಯದ ನಡುವೆ ವಿಶ್ವವಿದ್ಯಾಲಯದ ಕ್ರೀಕೆಟ್ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಭೂಮಿಯನ್ನು ನೀಡುವುದರ ಬಗ್ಗೆ KSCA ಹಾಗೂ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಕ್ರೀಕೆಟ್ ಕ್ರೀಡಾಂಗಣದ MoU ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು. |
| 09 | ಚಿನ್ನದ ಪದಕ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅನುಮೋದಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ PG & UG ವಿದ್ಯಾರ್ಥಿಗಳಿಗೆ 2023–24ನೇ ಸಾಲಿನಿಂದ ಘಟಿಕೋತ್ಸವ ನಡೆಯುವ ಸಂಧರ್ಭದಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡುವ ಕುರಿತು ಸಮಿತಿ ನೀಡಿರುವ ವರದಿಯನ್ನು ಸಭೆಯಲ್ಲಿ ಕುಲಸಚಿವರು (ಮೌಲ್ಯಮಾಪನ) ಕೂಲಂಕುಶವಾಗಿ ಚರ್ಚಿಸಿ ಮಂಡಿಸಿದರು. ಒಂದು ಚಿನ್ನದ ಪದಕ ನೀಡಲಿಚ್ಚಿಸುವ ಪ್ರಾಯೋಜಕರಿಗೆ/ ದಾನಿಗಳು ಮೂರು ಲಕ್ಷ ರೂಪಾಯಿಗಳನ್ನು ಹಣಕಾಸು ಅಧಿಕಾರಿಗಳು ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಹೆಸರಿನಲ್ಲಿ ಠೇವಣಿ ಇಡತಕ್ಕದ್ದು ಹಾಗೂ ಆ ಠೇವಣಿ ಹಣವನ್ನು ಯಾವುದೇ ಕಾರಣಕ್ಕೆ ಮರುಪಾವತಿಸಲಾಗುವುದಿಲ್ಲ. ಮುಂದುವರೆದು ಆ ಠೇವಣಿ ಹಣದಿಂದ ಬರುವಂತಹ ಬಡ್ಡಿ ಹಣದಿಂದ ಚಿನ್ನದ ಪದಕ ಹಾಗೂ ಪ್ರಶಸ್ತಿ ಪ್ರಮಾಣ ಪತ್ರ ವಿತರಿಸಲಾಗುವುದು ಎಂದು ಕುಲಸಚಿವರು (ಮೌಲ್ಯಮಾಪನ) ಸಭೆಗೆ ತಿಳಿಸಿದರು. ಇದನ್ನು ಸಭೆಯ ಸರ್ವಾನುಮತದಿಂದ ಅನುಮೋದಿಸಿ ಮುಂದುವರೆದು ಈ ವರದಿಯನ್ನು ಪರಿನಿಯಮಾವಳಿಯಾಗಿ ರೂಪಿಸಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಹಾಗೂ ಈ ಕುರಿತು ಪತ್ರಿಕೆಯಲ್ಲಿ News Item/ಜಾಹೀರಾತು ನೀಡಲು ಸಹ ನಿರ್ಧರಿಸಿ ಅನುಮೋದಿಸಿ ಒಪ್ಪಲಾಯಿತು. |
| 10 | LIC ತಂಡದಿಂದ ಮರು ತನಿಖೆಗೆ ಅರ್ಜಿ ಸಲ್ಲಿಸಿದ 4 ಕಾಲೇಜುಗಳು ಹಾಗೂ ತಡವಾಗಿ ಸಂಯೋಜನಾ ಅರ್ಜಿ ಸಲ್ಲಿಸಿದ 2 | LIC ತಂಡದಿಂದ ಮರು ತನಿಖೆಗೆ ಅರ್ಜಿ ಸಲ್ಲಿಸಿದ 4 ಕಾಲೇಜುಗಳು ಹಾಗೂ ತಡವಾಗಿ ಸಂಯೋಜನಾ ಅರ್ಜಿ ಸಲ್ಲಿಸಿದ 2 ಕಾಲೇಜುಗಳು |

| | | |
|---|---|---|
| | ಕಾಲೇಜುಗಳು ಸೂಚಿತ ಸಂಯೋಜನಾ ಅಂಕಗಳನ್ನು ಪಡೆದುಕೊಂಡಿರುವುದರಿಂದ ಸದರಿ ಕಾಲೇಜುಗಳಿಗೆ 2023-24 ನೇ ಸಾಲಿಗೆ ಸಂಯೋಜನಾ ಮುಂದುವರಿಕೆಗೆ ಅನುಮೋದನೆ ನೀಡುವ ಕುರಿತು. | ಸೂಚಿತ ಸಂಯೋಜನಾ ಅಂಕಗಳನ್ನು ಪಡೆದುಕೊಂಡಿರುವುದರಿಂದ LIC ತಂಡ ಭೇಟಿ ನೀಡಿ ಒಪ್ಪಿಸಿದ ವರದಿಯನ್ನು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ಸಭೆಗೆ ತಿಳಿಸಿದರು. ಮುಂದುವರೆದು ಆ ಕಾಲೇಜುಗಳ 2023-24 ನೇ ಸಾಲಿನ ಸಂಯೋಜನಾ ಮುಂದುವರಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು. |
| 11 | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು. | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ಬ್ರಿಟಿಷ್ ಕೌನ್ಸಿಲ್ ಸೇರಿ ಮಾಡಿಕೊಂಡ ಒಡಂಬಡಿಕೆಯ ಪ್ರಕಾರ ಸಾರ್ವಜನಿಕ ವಲಯಗಳ Leadership Development program ದಡಿ ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಯುಕೆ ಡೆಲಿಗೇಷನ್‌ಲ್ಲಿ ಭೇಟಿ ನೀಡಿದ ನಂತರ ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿರುವ ಶೈಕ್ಷಣಿಕ ಸೌಕರ್ಯಗಳ ಕುರಿತು ರಾಯಚೂರು ವಿಶ್ವವಿದ್ಯಾಲಯದ ಆಸಕ್ತಿಗಳನ್ನು ಕುರಿತು ಪ್ರಸ್ತುತಪಡಿಸಿದ್ದರು. ಈ ಹಿನ್ನಲೆಯಲ್ಲಿ ಕರ್ನಾಟಕ-ವೆಲ್ಸ್ ವಿಶ್ವವಿದ್ಯಾಲಯಗಳ ಒಡಂಬಡಿಕೆ ಯೋಜನೆಗಳ ಅಡಿಯಲ್ಲಿ ಕಾರ್ಡಿಫ್ ಮೇಟ್ರೋ ಪಾಲಿಟನ್ ವಿಶ್ವವಿದ್ಯಾಲಯ ಜೊತೆಗೆ ನಮ್ಮ ವಿಶ್ವವಿದ್ಯಾಲಯ ಸಹಯೋಗ ಹೊಂದಿದೆ. ಅದರೊಂದಿಗೆ ಕೆಪಾಸಿಟಿ ಬಿಲ್ಡಿಂಗ್ ಸಲುವಾಗಿ ಕಂಪ್ಯೂಟರ್ ಸೈನ್ಸ್ ವಿಭಾಗದ ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಸೈಬರ್ ಸೆಕ್ಯೂರಿಟಿ ವಿಷಯದಲ್ಲಿ ವಿಶೇಷ ಉಪನ್ಯಾಸ/ ತರಬೇತಿ ನೀಡಲು ಒಡಂಬಡಿಕೆಯಾಗಿದೆ.<br><br>ಈಗಾಗಲೇ ಕಾರ್ಡಿಫ್ ಮೇಟ್ರೋ ಪಾಲಿಟನ್ ವಿಶ್ವವಿದ್ಯಾಲಯವು 5000 ಪೌಂಡಗಳ ಮ್ಯಾಚಿಂಗ್ ಗ್ರಾಂಟ್‌ನ್ನು Global Wales Fundನಿಂದ ಪಡೆದಿದೆ.<br><br>ಮುಂದುವರೆದು, ಒಡಂಬಡಿಕೆ ಪ್ರಕಾರ ಕೆಪ್ಯಾಸಿಟಿ ಬಿಲ್ಡಿಂಗ್ ಕಾರ್ಯಕ್ರಮ/ ಕಾರ್ಯಗಾರ ಮಾರ್ಚ್ ತಿಂಗಳ ದಿನಾಂಕ 25 ರಿಂದ ನಡೆಸಲು ಉದ್ದೇಶ ಹೊಂದಿರುತ್ತದೆ. ಕರ್ನಾಟಕ-ವೇಲ್ಸ್ ಒಡಂಬಡಿಕೆಯ ಪ್ರಕಾರ 5000 ಪೌಂಡ್‌ಗಳ ಮ್ಯಾಚಿಂಗ್ ಗ್ರಾಂಟ್‌ನ್ನು ರಾಯಚೂರು ವಿಶ್ವವಿದ್ಯಾಲಯವು ಈ ಕಾರ್ಯಕ್ರಮಕ್ಕಾಗಿ ಮೀಸಲಿಡಬೇಕಾಗುತ್ತದೆ. ಈ ವಿಚಾರದ ಸಾಧಕ/ಭಾದಕಗಳ ಬಗ್ಗೆ ಚರ್ಚಿಸಿ ಈ ಒಡಂಬಡಿಕೆಯಿಂದ ರಾಯಚೂರು ವಿಶ್ವವಿದ್ಯಾಲಯಕ್ಕಾಗುವ ಪ್ರಯೋಜನಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ 5000 ಪೌಂಡ್‌ಗಳ ಮ್ಯಾಚಿಂಗ್ ಗ್ರಾಂಟ್ಸ್ ನೀಡಬಹುದಾಗಿ ನಿರ್ಧರಿಸಿ ಅನುಮೋದಿಸಲಾಯಿತು. |

27/12/23

**ಕುಲಸಚಿವರು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

27-12-2023

**ಕುಲಪತಿಗಳು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು